ಯಾವನಿಗೋ ಹುಟ್ಟಿದ ಮಗಾನ ನನ್ನದು ಅಂತ ನಂಬಿಕೊಂಡು ನನಗೆ ಗಂಡು ಹುಟ್ಟದೆ ಈ ಮಗನಿಗೆ ಆಸ್ತಿ ಬರೀತೀನಿ ಅಂತ ಕುಣಿತಾವನಲ್ಲ ನಿಮ್ಮಪ್ಪ, ಅವನಿಗೇನು ಬುದ್ಧಿ ಇದ್ದದ. ಕೇಸು ಹಾಕದೆಯ ಕೋರ್ಟಗೆ ಹೋಗೋದೆಯ. ನಿಮ್ಮಮ್ಮ ಗಂಡನಿಗೆ ಹೆದರುತ್ತೆ. ಹೆದರಬೇಡ ಅಂತ ಹೇಳು. ನಲವತ್ತು ವರ್ಷ ಗಂಡನಿಗೆ ಹೆದರಿ ಹೆದರಿ ಬಾಳಿದ್ದು ಸಾಕು. ಮದುವೆ ವಯಸ್ಸಿನ ಮೊಮ್ಮಗಳು ಮನೇಲಿ ಇಟ್ಟುಕೊಂಡು ಅದೇ ವಯಸ್ಸಿನ ಹುಡುಗೀನ ಇಟ್ಟುಕೊಂಡವನಲ್ಲ ನಾಚಿಕೆ ಮಾನಮರ್ಯಾದೆ ಏನಾದ್ರು ಇದ್ದದ ಆವಯ್ಯನಿಗೆ, ಇಟ್ಟುಕಂಡವಳು ಗಂಡು ಹೆತ್ತವಳೇ ಅಂತ ಊರಿಗೆಲ್ಲಾ ಬೂಂದಿ ಹಂಚಿ ನಮ್ಮ ಬಾಯಿಗೆ ಮಣ್ಣು ಹಾಕಕ್ಕೆ ಹೊಂಟವನಲ್ಲ ಸುಮ್ಮನೆ ಬಿಡಕ್ಕಾದದ, ನಿಮ್ಮಮ್ಮನಿಗೆ ಹೇಳು ನಮ್ಮ ಲಾಯರ್ ಏನು ಹೇಳ್ತಾರೋ ಹಂಗೆ ಕೋರ್ಟ್‌ನಲ್ಲಿ ಹೇಳಬೇಕು. ನ್ಯಾಯವಾಗಿ ನಾವು ಅನುಭವಿಸಬೇಕಾದ ಆಸ್ತೀನ ಯಾರೋ ಹಾದರಗಿತ್ತಿ ಅವಳ ಮಗ ಅನುಭವಿಸೋಕೆ ಬಿಡಕ್ಕಾಗಲ್ಲ, ಅಂತ ಹೇಳಿ ಪ್ರಕಾಶ ಚಪ್ಪಲಿ ಮೆಟ್ಟಿಕೊಂಡು ಹೊರಗೋದ. ಅಳಿಯನ ಈ ಎಲ್ಲಾ ಮಾತುಗಳು ಒಳಮನೆಯಲ್ಲಿದ್ದ ಶಾರದಮ್ಮನವರಿಗೆ ಸ್ಪಷ್ಟವಾಗಿಯೇ ಕೇಳಿಸಿದವು. ಅತ್ತೆಗೆ ಕೇಳಿಸಲಿ ಎಂದೇ ಪ್ರಕಾಶ ಜೋರಾಗಿಯೇ ಮಾತಾಡಿದ್ದ. ಶಾರದಮ್ಮನಿಗೆ ನನ್ನ ಗಂಡ ಈ ಇಳಿವಯಸ್ಸಿನಲ್ಲಿ ಯಾಕಾದ್ರೂ ಹೀಗೆ ಮಾಡಿದ್ರೋ, ಮೊಮ್ಮಗಳ ವಯಸ್ಸಿನ ಆ ಸುನಂದಾನ ಕೂಡಿಕೆ ಮಾಡಕಂಡರಲ್ಲ ಯಾರಾದ್ರೂ ಒಪ್ಪೋ ಕೆಲಸಾನ. ಊರಾದ ಊರೆಲ್ಲ ಇದೇ ವಿಷಯಾನ ಎಲೆಅಡಕೆ ಮಾಡಿಕೊಂಡು ಅಗೀತ ಐತೆ. ನೆಂಟರಿಷ್ಟರು ಬಂಧುಬಳಗವೆಲ್ಲಾ ತಿಗ ಬಡಕೊಂಡು ನಗ್ತಾವರೆ. ತಲೆ ಎತ್ತಿಕೊಂಡು ಎಲ್ಲೂ ಹೋಗಂಗಿಲ್ಲ, ಬೇಕಾಗಿತ್ತಾ ಇದು. ಹಾಳಾಗಿ ಹೋಗಲಿ ಅತ್ಲಾಗೆ ಅಂದ್ರೆ ಗಂಡುಮಗ ಹುಟ್ಟಿಸಿದ್ದೀನಿ ಅವನೇ ನನಗೆ ಗತಿ ಕಾಣಿಸೋನು, ಅವನಿಗೇ ಆಸ್ತಿ ಬರೀತೀನಿ ಅಂತ ಕುಂತವರಲ್ಲ ನನ್ನ ಹೊಟ್ಟೇಲಿ ಗಂಡು ಹುಟ್ಟದೆ ಇರಬಹುದು ಆದ್ರೆ ಮಗಳ ಹೊಟ್ಟೇಲಿ ಗಂಡು ಹುಟ್ಟದೆ. ಶಿವು ಹುಟ್ಟಿದಾಗಿಂದ ಅವನು ಈ ಮನೆ ಮಗನಾಗಿ ಬೆಳೆದವನೆ; ಅವನಿಗೆ ಅನ್ಯಾಯ ಮಾಡಕ್ಕೆ ಹೆಂಗೆ ಮನಸ್ಸು ಬಂತೋ ಇವರಿಗೆ. ಹತ್ತರಲ್ಲಿ ಒಂದು ಪಾಲು ಇವರಿಗೆ ಕೊಟ್ಟು ಒಂಬತ್ತು ಪಾಲು ಅವಳಿಗೆ, ಅವಳ ಹೊಟ್ಟೇಲಿ ಹುಟ್ಟಿದ ಮಗನಿಗೆ ಬರೀತೀನಿ ಅಂತಾರಲ್ಲ ಯಾರು ಬುದ್ಧಿ ಹೇಳ್ತಾರೆ ಇವರಿಗೆ. ಅಲ್ಲ, ನಮ್ಮ ಶೋಭ ಯಜಮಾನರು ಹೇಳುವಂಗೆ ಆ ಮಗ ಇವರದೇ ಅಂತ ಹೆಂಗೆ ನಂಬದು,

